ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 25-10-2002

# *ಬ್ರಾಹ್ಮಣ ಜೀವನದ ಆಧಾರ - ಪವಿತ್ರತೆಯ ಘನತೆ*

(ब्राह्मण जीवन का आधार - प्युरिटी की रॉयल्टी)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಸ್ನೇಹದ ಸಾಗರ ತಂದೆಯು ತನ್ನ ಸ್ನೇಹಿ ಮಕ್ಕಳನ್ನು ನೋಡಲು ಬಂದಿದ್ದಾರೆ. ನಾಲ್ಕಾರು ಕಡೆಯ ಸ್ನೇಹಿ ಮಕ್ಕಳು ಆತ್ಮೀಯ ಸೂಕ್ಷ್ಮವಾದ ಎಳೆಗಳಲ್ಲಿ ಬಂಧಿಸಿಕೊಂಡು ತಮ್ಮ ಮಧುರವಾದ ಮನೆಗೆ ಬಂದು ತಲುಪಿದ್ದೀರಿ. ಹೇಗೆ ಮಕ್ಕಳು ಸ್ನೇಹಕ್ಕೆ ಆಕರ್ಷಿತರಾಗಿ ಬಂದು ತಲುಪಿದ್ದಾರೆಯೋ ಅದೇ ರೀತಿ ತಂದೆಯು ಮಕ್ಕಳ ಸ್ನೇಹದ ಹಗ್ಗದಲ್ಲಿ ಬಂಧಿತರಾಗಿ ಮಕ್ಕಳ ಸಮ್ಮುಖದಲ್ಲಿ ಬಂದು ತಲುಪಿದ್ದಾರೆ. ಬಾಪ್‌ದಾದಾ ನಾಲ್ಕಾರು ಕಡೆಯ ಮಕ್ಕಳು ದೂರದಲ್ಲಿ ಕುಳಿತಿದ್ದರೂ ತಂದೆಯ ಸ್ನೇಹದಲ್ಲಿ ಸಮಾವೇಶವಾಗಿರುವುದನ್ನು ನೋಡುತ್ತಿದ್ದಾರೆ. ಸಮ್ಮುಖದಲ್ಲಿರುವ ಮಕ್ಕಳನ್ನೂ ಸಹ ನೋಡುತ್ತಿದ್ದಾರೆ ಮತ್ತು ದೂರದಲ್ಲಿ ಕುಳಿತಿರುವ ಮಕ್ಕಳನ್ನು ನೋಡುತ್ತಾ ನೋಡುತ್ತಾ ಹರ್ಷಿತರಾಗುತ್ತಿದ್ದಾರೆ. ಇಂತಹ ಆತ್ಮಿಕ, ಅವಿನಾಶಿ ಸ್ನೇಹ, ಪರಮಾತ್ಮನ ಸ್ನೇಹ, ಆತ್ಮಿಕ ಸ್ನೇಹ ಇಡೀ ಕಲ್ಪದಲ್ಲಿ ಈಗಲೇ ಅನುಭವ ಮಾಡುತ್ತಿದ್ದೀರಲ್ಲವೇ?

ಬಾಪ್‌ದಾದಾ ಪ್ರತಿಯೊಬ್ಬ ಮಕ್ಕಳ ಪವಿತ್ರತೆಯ ಶ್ರೇಷ್ಠತೆಯನ್ನು ನೋಡುತ್ತಿದ್ದಾರೆ. ಪವಿತ್ರತೆಯು ಬ್ರಾಹ್ಮಣ ಜೀವನದ ಶ್ರೇಷ್ಠತೆಯಾಗಿದೆ. ಅಂದಾಗ ಪ್ರತಿಯೊಬ್ಬ ಮಕ್ಕಳ ತಲೆಯ ಮೇಲೆ ಆತ್ಮಿಕ ಶ್ರೇಷ್ಠತೆಯ ಗುರುತನ್ನು ಮತ್ತು ಪವಿತ್ರತೆಯ ಪ್ರಕಾಶತೆಯ ಕಿರೀಟವನ್ನು ನೋಡುತ್ತಿದ್ದಾರೆ. ತಾವೆಲ್ಲರೂ ತಮ್ಮ ಪವಿತ್ರತೆಯ ಕಿರೀಟ ಹಾಗೂ ಆತ್ಮಿಕ

ಶ್ರೇಷ್ಠತೆಯ ಕಿರೀಟವನ್ನು ನೋಡುತ್ತಿದ್ದೀರಾ? ಹಿಂದೆ ಕುಳಿತಿರುವಂತಹವರೂ ಸಹ ನೋಡುತ್ತಿದ್ದೀರಾ? ಇದು ಎಷ್ಟೊಂದು ಸುಂದರವಾದ ಕಿರೀಟಧಾರಿಗಳ ಸಭೆಯಾಗಿದೆ. ಪಾಂಡವರೇ ಹೌದಲ್ಲವೇ? ಕಿರೀಟಗಳು ಹೊಳೆಯುತ್ತಿವೆಯಲ್ಲವೇ? ಇಂತಹ ಸಭೆಯನ್ನು ನೋಡುತ್ತಿದ್ದೀರಲ್ಲವೇ! ಕುಮಾರಿಯರು, ಕಿರೀಟಧಾರಿ ಕುಮಾರಿಯರಾಗಿದ್ದಾರೆ. ಮಕ್ಕಳ ಗೌರವಾನ್ವಿತ ಪರಿವಾರ ಎಷ್ಟೊಂದು ಶ್ರೇಷ್ಠವಾಗಿದೆ ಎಂದು ಬಾಪ್‌ದಾದಾ ನೋಡುತ್ತಿದ್ದಾರೆ. ತಮ್ಮ ಅನಾದಿ ಶ್ರೇಷ್ಠತೆಯನ್ನು ನೆನಪು ಮಾಡಿಕೊಳ್ಳಿ - ತಾವಾತ್ಮರು ಪರಂಧಾಮದಲ್ಲಿರುವಾಗ ಆತ್ಮರೂಪದಲ್ಲಿ ತಮ್ಮ ಆತ್ಮಿಕ ಶ್ರೇಷ್ಠತೆ ವಿಶೇಷವಾಗಿದೆ. ಸರ್ವಾತ್ಮರು ಪ್ರಕಾಶ ರೂಪದಲ್ಲಿರುತ್ತಾರೆ. ಆದರೆ ತಮ್ಮ ಹೊಳಪು ಸರ್ವ ಆತ್ಮರಿಗಿಂತಲೂ ಶ್ರೇಷ್ಠವಾಗಿದೆ. ಪರಂಧಾಮ ನೆನಪಿಗೆ ಬರುತ್ತಿದೆಯಲ್ಲವೇ? ಅನಾದಿಕಾಲದಿಂದ ತಮ್ಮ ಹೊಳಪು ಮತ್ತು ನಶೆಯು ಭಿನ್ನವಾಗಿದೆ. ಹೇಗೆ ಆಕಾಶದಲ್ಲಿ ಎಲ್ಲಾ ನಕ್ಷತ್ರಗಳು ಹೊಳೆಯುತ್ತಿರುತ್ತದೆ ಮತ್ತು ಎಲ್ಲವೂ ಪ್ರಕಾಶವಾಗಿಯೇ ಇರುತ್ತದೆ, ಆದರೆ ಸರ್ವ ನಕ್ಷತ್ರಗಳಲ್ಲಿ ಕೆಲವೊಂದು ವಿಶೇಷ ನಕ್ಷತ್ರಗಳ ಹೊಳಪು ಅತೀತ ಮತ್ತು ಪ್ರಿಯವಾಗಿರುತ್ತವೆಯೋ ಅದೇ ರೀತಿ ಸರ್ವಾತ್ಮರ ಮಧ್ಯದಲ್ಲಿ ತಾವಾತ್ಮರ ಹೊಳಪು ಆತ್ಮಿಕ ಶ್ರೇಷ್ಠತೆ, ಪವಿತ್ರತೆಯ ಹೊಳಪು ಅತೀತವಾಗಿರುತ್ತದೆ, ನೆನಪಿಗೆ ಬರುತ್ತಿದೆಯಲ್ಲವೆ? ಪುನಃ ಆದಿಕಾಲದಲ್ಲಿ ಬನ್ನಿರಿ. ಆದಿಕಾಲವನ್ನು ನೆನಪು ಮಾಡಿಕೊಂಡಾಗ ಆದಿಕಾಲದ ದೇವತಾ ಸ್ವರೂಪದಲ್ಲಿ ಆತ್ಮಿಕ ಶ್ರೇಷ್ಠತೆಯ ವ್ಯಕ್ತಿತ್ವವು ಎಷ್ಟು ವಿಶೇಷವಾಗಿದೆ? ಇಡೀ ಕಲ್ಪದಲ್ಲಿ ದೇವತಾ ಸ್ವರೂಪದ ಶ್ರೇಷ್ಠತೆಯು ಇಲ್ಲಿಯವರೆಗೆ ಯಾರಲ್ಲಿದೆ? ಆತ್ಮಿಕ ಶ್ರೇಷ್ಠತೆ, ಪವಿತ್ರತೆಯ ವ್ಯಕ್ತಿತ್ವವು ನೆನಪಿದೆಯಲ್ಲವೇ, ನೆನಪಿದೆಯಲ್ಲವೇ? ಪಾಂಡವರಿಗೆ ನೆನಪಿದೆಯೇ? ನೆನಪಿಗೆ ಬಂದಿತೇ? ಪುನಃ ಮಧ್ಯದಲ್ಲಿ ಬಂದಾಗ ಮಧ್ಯಕಾಲ ದ್ವಾಪರದಿಂದ ತಮ್ಮ ಪೂಜ್ಯಚಿತ್ರಗಳನ್ನು ತಯಾರು ಮಾಡುತ್ತಾರೆ, ಆ ಚಿತ್ರಗಳ ಶ್ರೇಷ್ಠತೆ ಮತ್ತು ಪೂಜೆಯ ಶ್ರೇಷ್ಠತೆ ದ್ವಾಪರದಿಂದ ಇಲ್ಲಿಯವರೆಗೆ ನಡೆಯುತ್ತದೆ. ಅದು ಯಾರ ಚಿತ್ರವಾಗಿದೆ? ಅನೇಕರ ಚಿತ್ರಗಳಿವೆ. ಹಾಗೆಯೇ ವಿಧಿಪೂರ್ವಕ ಪೂಜೆಯು ಯಾವ ಆತ್ಮರಿಗಿದೆ? ಚಿತ್ರಗಳಂತೂ ಎಲ್ಲರದ್ದೂ ಇದೆ. ಅದರಲ್ಲಿ ಕೆಲವರು ಧರ್ಮಗುರುಗಳಿದ್ದಾರೆ. ಕೆಲವರು ರಾಜಕೀಯ ವ್ಯಕ್ತಿಗಳಿದ್ದಾರೆ. ಚಲನಚಿತ್ರದಲ್ಲಿ ಅಭಿನಯಿಸುವವರಿದ್ದಾರೆ. ಆದರೆ ಚಿತ್ರಗಳಲ್ಲಿ ಶ್ರೇಷ್ಠತೆ ಮತ್ತು ಪೂಜೆಯ ಶ್ರೇಷ್ಠತೆ ಯಾರದನ್ನು ನೋಡಿದಿರಿ? ಡಬಲ್ ವಿದೇಶಿಯರು ತಮ್ಮ ಪೂಜೆಯನ್ನು ನೋಡಿದ್ದೀರಾ? ತಾವೆಲ್ಲರೂ ನೋಡಿದ್ದೀರಾ ಅಥವಾ ಕೇವಲ ಕೇಳಿದ್ದೀರಾ? ಈ ರೀತಿ ವಿಧಿಪೂರ್ವಕ ಪೂಜೆ ಮತ್ತು ಚಿತ್ರಗಳ ಹೊಳಪು, ಆತ್ಮೀಯತೆ ಯಾರಲ್ಲಿಯೂ ಇಲ್ಲ ಹಾಗೂ ಇರುವುದಿಲ್ಲ. ಏಕೆ? ಪವಿತ್ರತೆಯೇ ಶ್ರೇಷ್ಠತೆಯಾಗಿದೆ. ಪವಿತ್ರತೆಯೇ ವ್ಯಕ್ತಿತ್ವವಾಗಿದೆ. ಒಳ್ಳೆಯದು. ತಮ್ಮ ಪೂಜೆಯನ್ನು ನೋಡಿದಿರಲ್ಲವೆ. ನೋಡಿಲ್ಲವೆಂದರೆ ಈಗ ನೋಡಿಕೊಳ್ಳಿ. ಈಗ ಅಂತ್ಯದಲ್ಲಿ ಸಂಗಮಯುಗಕ್ಕೆ ಬಂದಾಗ ಸಂಗಮದಲ್ಲಿ ಇಡೀ ವಿಶ್ವದಲ್ಲಿ ಪವಿತ್ರತೆಯ ಶ್ರೇಷ್ಠತೆಯೇ ಬ್ರಾಹ್ಮಣ ಜೀವನದ ಆಧಾರವಾಗಿದೆ. ಪವಿತ್ರತೆಯಿಲ್ಲದಿದ್ದರೆ ಪ್ರಭುವಿನ ಪ್ರೀತಿಯ ಅನುಭವವಾಗುವುದಿಲ್ಲ. ಪರಮಾತ್ಮನ ಸರ್ವ ಪ್ರಾಪ್ತಿಗಳ ಅನುಭವವಾಗುವುದಿಲ್ಲ. ಬ್ರಾಹ್ಮಣ ಜೀವನದ ವ್ಯಕ್ತಿತ್ವವು ಪವಿತ್ರತೆಯಾಗಿದೆ ಮತ್ತು ಪವಿತ್ರತೆಯೇ ಆತ್ಮಿಕ ಶ್ರೇಷ್ಠತೆಯಾಗಿದೆ. ಹಾಗಾದರೆ ಆದಿ, ಅನಾದಿ ಮತ್ತು ಆದಿ-ಮಧ್ಯ-ಅಂತ್ಯವು ಇಡೀ ಕಲ್ಪದಲ್ಲಿ ಈ ಆತ್ಮಿಕ ಶ್ರೇಷ್ಠತೆಯು ನಡೆಯುತ್ತಿರುತ್ತದೆ. ದರ್ಪಣದಲ್ಲಿ ತಮ್ಮನ್ನು ತಾವು ನೋಡಿಕೊಳ್ಳಿ. ದರ್ಪಣ ತಮ್ಮೆಲ್ಲರ ಬಳಿ ಇದೆಯಲ್ಲವೇ? ನೋಡಿಕೊಳ್ಳಬಹುದಲ್ಲವೇ? ಹಾಗಾದರೆ ನೋಡಿಕೊಳ್ಳಿ. ನಮ್ಮ ಅಂತರ್ಯದಲ್ಲಿ ಪವಿತ್ರತೆಯ ಶ್ರೇಷ್ಠತೆಯು ಎಷ್ಟು ಪರ್ಸೆಂಟ್ ನಲ್ಲಿದೆ? ನಮ್ಮ ಚಹರೆಯಿಂದ ಪವಿತ್ರತೆಯ ಹೊಳಪು ಕಂಡುಬರುತ್ತದೆಯೇ? ನಡವಳಿಕೆಯಲ್ಲಿ ಪವಿತ್ರತೆಯ

ನಶೆ ಕಂಡುಬರುತ್ತದೆಯೇ? ಜಲಕ್ ಅರ್ಥಾತ್ ನಶೆಯಾಗಿದೆ. ನಡವಳಿಕೆಯಲ್ಲಿ ಆ ನಶೆ ಅರ್ಥಾತ್ ಆತ್ಮಿಕ ನಶೆ ಕಂಡುಬರುತ್ತದೆಯೇ. ಹಾಗಾದರೆ ತಮ್ಮನ್ನು ನೋಡಿಕೊಂಡಿದ್ದೀರಾ? ನೋಡಿಕೊಳ್ಳುವುದರಲ್ಲಿ ಎಷ್ಟು ಸಮಯ ಹಿಡಿಸುತ್ತದೆ? ಸೆಕೆಂಡ್ ಸಾಕಲ್ಲವೇ? ಹಾಗಾದರೆ ಎಲ್ಲರೂ ತಮ್ಮನ್ನು ತಾವು ನೋಡಿಕೊಳ್ಳಿರಿ.

ಕುಮಾರಿಯರ ಪ್ರತಿ: ಹೊಳಪು ಮತ್ತು ನಶೆಯಿದೆಯೇ? ಒಳ್ಳೆಯದು. ಆ ಎಲ್ಲರು ಎದ್ದೇಳಿ. ಎದ್ದು ನಿಂತುಕೊಳ್ಳಿ. (ಕುಮಾರಿಯರು ಕೆಂಪುಪಟ್ಟಿಯನ್ನು ಹಾಕಿಕೊಂಡು ಕುಳಿತಿದ್ದಾರೆ. ಆ ಪಟ್ಟಿಯ ಮೇಲೆ ಏಕವ್ರತವೆಂದು ಬರೆಯಲ್ಪಟ್ಟಿದೆ) ಸುಂದರವಾಗಿದೆಯಲ್ಲವೇ? ಏಕವ್ರತದ ಅರ್ಥವೇ ಪವಿತ್ರತೆಯ ಶ್ರೇಷ್ಠತೆಯಾಗಿದೆ. ಏಕವ್ರತದ ಪಾಠವನ್ನು ಪಕ್ಕಾ ಮಾಡಿಕೊಂಡಿದ್ದೀರಾ. ಇಲ್ಲಿಂದ ಹಿಂತಿರುಗಿದ ನಂತರ ಪಾಠವನ್ನು ಕಚ್ಚಾ ಮಾಡಿಕೊಳ್ಳಬೇಡಿ. ಮತ್ತೆ ಕುಮಾರರ ಗ್ರೂಪ್ ಚೆನ್ನಾಗಿದೆ. ಕುಮಾರರು ಹೃದಯದಲ್ಲಿ ಪ್ರತಿಜ್ಞತೆಯ ಪಟ್ಟಿಯನ್ನು ಬಂಧಿಸಿಕೊಂಡಿದ್ದೀರಾ? ಇವರು ಹೊರಗಡೆಯಿಂದ ಬಂಧಿಸಿಕೊಂಡಿದ್ದಾರೆ. ಮತ್ತೆ ಪ್ರತಿಜ್ಞತೆಯ ಪಟ್ಟಿಯನ್ನು ಬಂಧಿಸಿಕೊಂಡಿದ್ದೀರಾ? ಸದಾ ಅರ್ಥಾತ್ ನಿರಂತರ ಪವಿತ್ರತೆಯ ವ್ಯಕ್ತಿತ್ವದಲ್ಲಿರುವಂತಹ ಕುಮಾರರಾಗಿದ್ದೀರಿ. ಈ ರೀತಿ ಆಗಿದ್ದೀರಾ? ಹೌದು ಅಥವಾ ಇಲ್ಲವೆಂದು ಹೇಳಿರಿ. ಅಥವಾ ಹಿಂತಿರುಗಿದ ನಂತರ ಪತ್ರ ಬರೆಯುತ್ತೀರೋ ಇಲ್ಲವೆಂದರೆ ಏರು-ಪೇರು ಆಗುತ್ತೀರೋ. **ಎಲ್ಲಿಯತನಕ ಬ್ರಾಹ್ಮಣ ಜೀವನದಲ್ಲಿ ಜೀವಿಸಿರುತ್ತೀರೋ ಅಲ್ಲಿಯತನಕ ಸಂಪೂರ್ಣ ಪವಿತ್ರರಾಗಲೇಬೇಕಾಗಿದೆ. ಈ ರೀತಿ ಪ್ರತಿಜ್ಞೆಯನ್ನು ಮಾಡಿದ್ದೀರಾ? ಪಕ್ಕಾ ಪ್ರತಿಜ್ಞೆಯನ್ನು ಮಾಡಿದ್ದರೆ ಕೈಯನ್ನು ಎತ್ತಿ. ದೂರದರ್ಶನದಲ್ಲಿ (ಟಿ.ವಿ) ತಮ್ಮ ಫೋಟೊ ಬರುತ್ತಿದೆ. ಯಾರು ಪ್ರತಿಜ್ಞೆಯಲ್ಲಿ ಸಡಿಲವಾಗುತ್ತೀರೋ, ಅವರ ಚಿತ್ರವನ್ನು ಕಳುಹಿಸಲಾಗುತ್ತದೆ. ಅದಕ್ಕೋಸ್ಕರ ಸಡಿಲವಾಗಬೇಡಿ, ಪಕ್ಕಾ ಆಗಿ. ಹೌದು ಪಕ್ಕಾ ಆಗಿದ್ದೀರಾ, ಪಾಂಡವರಂತೂ ಪಕ್ಕಾ ಆಗಿರುತ್ತಾರೆ. ಪಕ್ಕಾ ಪಾಂಡವರು ಬಹಳ ಒಳ್ಳೆಯವರು. ಶುಭಭಾವನೆ, ಶುಭಕಾಮನೆಯು ಪವಿತ್ರತೆಯ ವೃತ್ತಿಯಾಗಿದೆ. ಯಾರು ಹೇಗಾದರೂ ಇರಲಿ ಆದರೆ ಪವಿತ್ರ ವೃತ್ತಿ, ಶುಭಭಾವನೆ ಮತ್ತು ಶುಭಕಾಮನೆಯಿರಲಿ ಮತ್ತು ಪವಿತ್ರ ದೃಷ್ಟಿ ಅರ್ಥಾತ್ ಸದಾ ಪ್ರತಿಯೊಬ್ಬರನ್ನು ಅತ್ಮಿಕ ರೂಪದಲ್ಲಿ ನೋಡಿರಿ ಅಥವಾ ಫರಿಶ್ತೆಗಳ ರೂಪದಲ್ಲಿ ನೋಡಿ, ವೃತ್ತಿ, ದೃಷ್ಟಿ ಮತ್ತು ಮೂರನೆಯದಾಗಿದೆ –ಕೃತಿ ಅರ್ಥಾತ್ ಕರ್ಮದಲ್ಲಿ ಅಂದರೆ ಕರ್ಮದಲ್ಲಿಯೂ ಸದಾ ಪ್ರತಿಯೊಂದು ಆತ್ಮರಿಗೆ ಸುಖವನ್ನು ಕೊಡಿ ಮತ್ತು ತೆಗೆದುಕೊಳ್ಳಿ. ಇದು ಪವಿತ್ರತೆಯ ಗುರುತಾಗಿದೆ.** ವೃತ್ತಿ, ದೃಷ್ಟಿ ಮತ್ತು ಕೃತಿ ಮೂರರಲ್ಲಿಯೂ ಧಾರಣೆ ಇರಬೇಕು. ಯಾರು ಏನೇ ಮಾಡಲಿ ದುಃಖ ಕೊಡಲಿ, ನಿಂದಿಸಲಿ ಆದರೂ ಸಹ ನಮ್ಮ ಕರ್ತವ್ಯವೇನಾಗಿದೆ? ದುಃಖವನ್ನು ಕೊಡುವವರನ್ನು ಅನುಸರಣೆ ಮಾಡಬೇಕೋ? ತಂದೆಯನ್ನು ಅನುಸರಣೆ ಮಾಡುವವರಾಗಿದ್ದೀರಲ್ಲವೇ? ಬ್ರಹ್ಮಾ ತಂದೆಯು ದುಃಖ ಕೊಟ್ಟರೋ ಅಥವಾ ಸುಖ ಕೊಟ್ಟರೋ? ಸುಖ ಕೊಟ್ಟರಲ್ಲವೇ? ತಾವೂ ಬ್ರಹ್ಮಾ ಅರ್ಥಾತ್ ಬ್ರಾಹ್ಮಣ ಆತ್ಮರು ಏನು ಮಾಡಬೇಕಾಗಿದೆ? ಯಾರೇ ದುಃಖ ಕೊಟ್ಟರೂ ನೀವು ಏನು ಮಾಡುತ್ತೀರಿ? ದುಃಖ ಕೊಡುತ್ತೀರಾ? ಕೊಡುವುದಿಲ್ಲವೇ? ಒಂದುವೇಳೆ ಬಹಳ ದುಃಖಕೊಟ್ಟರೆ? ಬಹಳ ನಿಂದನೆ ಮಾಡಿದರೆ ಅಥವಾ ಅಪಮಾನ ಮಾಡಿದರೆ ಅಥವಾ ನಿಂದನೆ ಮಾಡಿದರೆ ಸ್ವಲ್ಪ ಬೇಸರ ಮಾಡಿತ್ತಿಕೊಳ್ಳುತ್ತೀರೋ ಅಥವಾ ಇಲ್ಲವೋ? ಕುಮಾರಿಯರು ಬೇಜಾರು ಮಾಡಿಕೊಳ್ಳುತ್ತೀರಾ? ಸ್ವಲ್ಪ ಮಾಡಿಕೊಳ್ಳುತ್ತೀರಾ? ಹಾಗಾದರೆ ತಂದೆಯನ್ನು ಅನುಸರಣೆ ಮಾಡಿರಿ. **ನನ್ನ ಕರ್ತವ್ಯ ಏನಾಗಿದೆಯೆಂದು ಯೋಚನೆ ಮಾಡಿ. ಅವರ ಕರ್ತವ್ಯವನ್ನು ನೋಡಿ ತಮ್ಮ ಕರ್ತವ್ಯವನ್ನು ಮರೆಯಬೇಡಿ. ಅವರು ನಿಂದನೆ ಮಾಡುತ್ತಿದ್ದರೆ ಅಥವಾ ಗ್ಲಾನಿ ಮಾಡುತ್ತಿದ್ದರೂ ಸಹ ತಾವು ಸಹನಶೀಲ ದೇವಿ, ಸಹನಶೀಲ ದೇವ್ ಆಗಿಬಿಡಿ. ತಮ್ಮ ಸಹನಶೀಲತೆಯಿಂದ ನಿಂದನೆ**

ಮಾಡುವಂತಹವರನ್ನು ತಮ್ಮ ಕೊರಳಿನ ಹಾರವನ್ನಾಗಿ ಮಾಡಿಕೊಳ್ಳಿ. ಸಹನಶೀಲತೆಯಲ್ಲಿ ಬಹಳಷ್ಟು ಶಕ್ತಿಯಿದೆ. ಆದರೆ ಸ್ವಲ್ಪ ಸಮಯ ಸಹನೆ ಮಾಡಿಕೊಳ್ಳಬೇಕಾಗುತ್ತದೆ. ನೀವು ಸಹನಶೀಲತೆಯ ದೇವ ಅಥವಾ ದೇವಿಯರಾಗಿದ್ದೀರಲ್ಲವೇ? ಆಗಿದ್ದೀರಾ? ನಾನು ಸಹನಶೀಲ ದೇವತೆ ಅಥವಾ ದೇವಿ ಆಗಿದ್ದೇನೆ ಎನ್ನುವ ಸ್ಮೃತಿಯು ಸದಾ ಇರಲಿ. ದೇವತಾ ಅರ್ಥಾತ್ ಕೊಡುವಂತಹ ದಾತಾರಾಗಿದ್ದಾರೆ. ಯಾರೇ ಗ್ಲಾನಿ ಮಾಡಲಿ, ಗೌರವ ಕೊಡಲಿಲ್ಲವೆಂದರೆ ಇದೆಲ್ಲಾ ಕೆಲಸಕ್ಕೆ ಬಾರದೆ ಇರುವ ವಸ್ತು [ಕೊಳಕು) ಆಗಿದೆ. ಒಳ್ಳೆಯ ವಸ್ತುವಲ್ಲ ತಾನೇ? ಅಂದರೆ ಏಕೆ ತೆಗೆದುಕೊಳ್ಳುತ್ತೀರಿ? ಕೊಳಕನ್ನು ತೆಗೆದುಕೊಳ್ಳುತ್ತೀರಾ? ತೆಗೆದುಕೊಳ್ಳುವುದಿಲ್ಲ ತಾನೆ? ಅಪಮಾನ ಮಾಡುತ್ತಾರೆ. ನಿಂದನೆ ಮಾಡುತ್ತಾರೆ, ನಿಮಗೆ ತೊಂದರೆ ಕೊಡುತ್ತಾರೆ. ಗೌರವವನ್ನು ಕೊಡಲಿಲ್ಲವೆಂದರೆ ಇದೆಲ್ಲವೂ ಏನಾಗಿದೆ? ಒಳ್ಳೆಯ ವಸ್ತುವಾಗಿದೆಯೇ? ಹಾಗಾದರೆ ಏಕೆ ತೆಗೆದುಕೊಳ್ಳುತ್ತೀರಿ? ಸ್ವಲ್ಪವನ್ನು ತೆಗೆದುಕೊಳ್ಳುತ್ತೀರಿ, ನಂತರ ತೆಗೆದುಕೊಳ್ಳಬಾರದಿತ್ತೆಂದು ಯೋಚಿಸುತ್ತೀರಿ. ಹಾಗಾದರೆ ಈಗ ತೆಗೆದುಕೊಳ್ಳಬೇಡಿ. ತೆಗೆದುಕೊಳ್ಳುವುದು ಅರ್ಥಾತ್ ಮನಸ್ಸಿನಲ್ಲಿ ಧಾರಣೆ ಮಾಡುವುದು, ಬೇಜಾರು ಮಾಡಿಕೊಳ್ಳುವುದು ಅಂದರೆ ಮನಸ್ಸಿನಲ್ಲಿ ಧಾರಣೆ ಮಾಡುವುದು, ಫೀಲ್ ಆಗುವುದು. ತಮ್ಮ ಅನಾದಿಕಾಲ, ಆದಿ-ಮಧ್ಯ-ಸಂಗಮದ ಕಾಲ, ಇಡೀ ಕಲ್ಪದ ಪವಿತ್ರತೆಯ ಶ್ರೇಷ್ಠತೆ ಮತ್ತು ವ್ಯಕ್ತಿತ್ವವನ್ನು ನೆನಪು ಮಾಡಿ. ಯಾರು ಏನೇ ಮಾಡಲಿ, ತಮ್ಮ ವ್ಯಕ್ತಿತ್ವವನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಈ ಆತ್ಮಿಕ ನಶೆ ಇದೆಯಲ್ಲವೇ? ಡಬಲ್ ವಿದೇಶಿಗಳಿಗಂತೂ ಡಬಲ್ ನಶೆ ಇದೆಯಲ್ಲವೆ. ಡಬಲ್ ನಶೆಯಿದೆಯಲ್ಲವೇ? ಎಲ್ಲಾ ವಿಷಯಗಳಲ್ಲಿಯೂ ಡಬಲ್ ನಶೆ ಇರಲಿ. ಪವಿತ್ರತೆಯ ಡಬಲ್ ನಶೆಯಿರಲಿ. ಸಹನಶೀಲ ದೇವಿ, ದೇವತಾ ಆಗುವುದರಲ್ಲಿಯೂ ಡಬಲ್ ನಶೆಯಿರಲಿ. ಡಬಲ್ ನಶೆ ಇದೆಯಲ್ಲೇವೇ? ಕೇವಲ ಅಮರರಾಗಿರಿ, ಅಮರಭವ!ದ ವರದಾನವನ್ನು ಎಂದೂ ಮರೆಯಬೇಡಿ.ಒಳ್ಳೆಯದು.

ಯಾರು ಯುಗಲ್ ಅರ್ಥಾತ್ ಪ್ರವೃತ್ತಿಯಲ್ಲಿರುತ್ತಾರೆಯೋ ಅವರೇ ಒಂಟಿಯಾಗಿರುತ್ತಾರೆ. ಹೇಳುವುದರಲ್ಲಿ ಯುಗಲ್ ಎಂದು ಹೇಳಲಾಗುತ್ತದೆ. ಪ್ರವೃತ್ತಿಯಲ್ಲಿರುವವರು ಎದ್ದು ನಿಂತುಕೊಳ್ಳಿ. ಬಹಳಷ್ಟು ಯುಗಲ್ ಆಗಿರುವವರು ಇದ್ದಾರೆ. ಕುಮಾರ-ಕುಮಾರಿಯರು ಬಹಳ ಕಡಿಮೆ ಇದ್ದಾರೆ. ಕುಮಾರರಿಗಿಂತಲೂ ಯುಗಲ್ ಬಹಷ್ಟಿದ್ದಾರೆ. ಯುಗಲ್ ಮೂರ್ತಿ ಬಾಪ್‌ದಾದಾರವರು ತಾವೆಲ್ಲರು ಪ್ರವೃತ್ತಿಯಲ್ಲಿರಲು ಏಕೆ ಸಲಹೆ (ಡೈರೆಕ್ಷನ್) ಕೊಟ್ಟಿದ್ದಾರೆ? ವೃತ್ತಿಯಲ್ಲಿರಲು ಏಕೆ ಅವಕಾಶ ಕೊಟ್ಟಿದ್ದಾರೆ? ಗೊತ್ತಿದೆಯೇ? ಏಕೆಂದರೆ ಪ್ರವೃತ್ತಿಯಲ್ಲಿರುವವರ ಚರಣಗಳಿಗೆ ಮಹಾಮಂಡಲೇಶ್ವರರು ಬಾಗಬೇಕು. ಇಷ್ಟೊಂದು ಧೈರ್ಯವಿದೆಯೇ? ಗೃಹಸ್ತದಲ್ಲಿದ್ದೂ ಪವಿತ್ರವಾಗಿರುವುದು ಕಷ್ಟವಿದೆಯೆಂದು ಪ್ರಪಂಚದವರು ಹೇಳುತ್ತಾರೆ ಆದರೆ ತಾವು ಏನು ಹೇಳುತ್ತೀರಿ? ಕಷ್ಟವಿದೆಯೇ? ಅಥವಾ ಸಹಜವಾಗಿದೆಯೇ (ಬಹಳ ಸಹಜವಾಗಿದೆ) ಪಕ್ಕಾ ಆಗಿದ್ದೀರಾ ಅಥವಾ ಕೆಲವೊಮ್ಮೆ ಸಹಜ ಕೆಲವೊಮ್ಮೆ ಸೋಮಾರಿ (ಲೇಜಿ) ಆಗುತ್ತೀರಾ? ಬಾಪ್‌ದಾದಾ ತಮ್ಮನ್ನೆಲ್ಲಾ ಪ್ರಪಂಚದ ಮುಂದೆ ಉದಾಹರಣಾ ಮೂರ್ತಿಯನ್ನಾಗಿ ಮಾಡಿದ್ದಾರೆ. ಚಾಲೆಂಜ್ ಮಾಡಲು ಪ್ರವೃತ್ತಿಯಲ್ಲಿರುತ್ತಾ ನಿವೃತ್ತರು ಅಪವಿತ್ರತೆಯಿಂದ ನಿವೃತ್ತರಾಗಿರಬಹುದು. ಅಂದರೆ ತಾವು ಚಾಲೆಂಜ್ ಮಾಡುವಂತಹವರಲ್ಲವೇ? ಎಲ್ಲರೂ ಚಾಲೆಂಜ್ ಮಾಡುವಂತಹವರಾಗಿದ್ದೀರಿ, ಸ್ವಲ್ಪ ಸ್ವಲ್ಪ ಭಯಪಡುತ್ತಿಲ್ಲ ತಾನೆ? ಚಾಲೆಂಜ್ ಮಾಡುತ್ತೀರಾ ಆದರೆ ಏನಾಗುತ್ತದೆ ಎಂದು ಗೊತ್ತಿಲ್ಲ. ವಿಶ್ವದವರ ಜೊತೆ ಚಾಲೆಂಜ್ ಮಾಡಿ ಏಕೆಂದರೆ ಹೊಸ ವಿಚಾರವಾಗಿದೆ. ಜೊತೆಯಲ್ಲಿದ್ದರೂ ಸ್ವಪ್ನದಲ್ಲಿಯೂ ಅಪವಿತ್ರತೆಯ ಸಂಕಲ್ಪ ಬರುವುದಿಲ್ಲ. ಇದೇ ಸಂಗಮಯುಗದ ಬ್ರಾಹ್ಮಣ ಜೀವನದ ವಿಶೇಷತೆಯಾಗಿದೆ. ಅದೇ ರೀತಿ ವಿಶ್ವದ ಶೋಕೇಸ್ನಲ್ಲಿ ತಾವು ಉದಾಹರಣೆಯಾಗಿದ್ದೀರಿ.

ಮಾದರಿಯೆಂದಾದರೂ ಹೇಳಿ ಅಥವಾ ಉದಾಹರಣೆಯೆಂದಾದರೂ ಹೇಳಿ. ನಿಮ್ಮನ್ನು ನೋಡಿ ಎಲ್ಲರಲ್ಲೂ ಶಕ್ತಿ ಬರುತ್ತದೆ ಮತ್ತು ನಾವೂ ಸಹ ಆಗಬಹುದು. ಸರಿಯಾಗಿದೆಯಲ್ಲವೆ? ಶಕ್ತಿಯರು ಚೆನ್ನಾಗಿದ್ದೀರಾ? ಪಕ್ಕಾ ಆಗಿದ್ದೀರಲ್ಲವೆ? ಅರ್ಧವಲ್ಲ ತಾನೆ? ಪಕ್ಕಾ. ನಿಮ್ಮೆಲ್ಲರನ್ನು ನೋಡಿ ಬಾಪ್‌ದಾದಾ ಖುಷಿ ಪಡುತ್ತಿದ್ದಾರೆ. ಶುಭಾಷಯಗಳು, ನೋಡಿ ಎಷ್ಟೊಂದು ಮಕ್ಕಳಿದ್ದಾರೆ. ಬಹಳ ಒಳ್ಳೆಯದು.

ಶಿಕ್ಷಕಿಯರು ಉಳಿದುಕೊಂಡಿದ್ದಾರೆ. ಶಿಕ್ಷಕಿಯರಿಲ್ಲದೇ ಮುಕ್ತಿಯಿಲ್ಲ. ಶಿಕ್ಷಕಿಯರು ಎದ್ದೇಳಿ. ಒಳ್ಳೆಯದು. ಪಾಂಡವರೂ ಒಳೊಳ್ಳೆಯವರಿದ್ದಾರೆ. ವಾಹ್! ಶಿಕ್ಷಕಿಯರ ವಿಶೇಷತೆಯಾಗಿದೆ - ಪ್ರತಿಯೊಬ್ಬ ಶಿಕ್ಷಕಿಯರ ಚಿತ್ರದಿಂದ ಭವಿಷ್ಯವು ಕಾಣಿಸಬೇಕು ಹಾಗೂ ಪ್ರತಿಯೊಬ್ಬ ಶಿಕ್ಷಕಿಯರ ಚಹರೆಯಿಂದ ಫರಿಶ್ತಾ ಸ್ವರೂಪ ಕಾಣಿಸಬೇಕು. ಈ ರೀತಿಯ ಶಿಕ್ಷಕಿಯರಾಗಿದ್ದೀರಲ್ಲವೇ! ತಾವು ಫರಿಶ್ತೆಯರನ್ನು ನೋಡಿ ಅನೇಕರು ಫರಿಶ್ತೆಯರಾಗುತ್ತಾರೆ. ನೋಡಿ ಎಷ್ಟೊಂದು ಶಿಕ್ಷಕಿಯರಿದ್ದಾರೆ. ವಿದೇಶದವರು ಬಹಳಷ್ಟು ಶಿಕ್ಷಕಿಯರಿದ್ದಾರೆ. ವಿದೇಶದ ಗ್ರೂಪ್ನಲ್ಲಿ ಬಹಳಷ್ಟು ಶಿಕ್ಷಕಿಯರಿದ್ದಾರೆ. ಈಗ ಸ್ವಲ್ಪವೇ ಶಿಕ್ಷಕಿಯರು ಬಂದಿದ್ದಾರೆ. ಯಾರೆಲ್ಲಾ ಬಂದಿಲ್ಲವೋ ಅವರನ್ನು ಬಾಪ್‌ದಾದಾ ನೆನಪು ಮಾಡಿಕೊಳ್ಳುತ್ತಿದ್ದಾರೆ. ಒಳ್ಳೆಯದು. ಈಗ ಎಲ್ಲಾ ಶಿಕ್ಷಕಿಯರು ಒಂದುಗೂಡಿ ಯೋಜನೆಯನ್ನು ಮಾಡಿ. ತಂದೆಯನ್ನು ನಿಮ್ಮ ನಡವಳಿಕೆ ಮತ್ತು ಚಹರೆಯಿಂದ ಹೇಗೆ ಪ್ರತ್ಯಕ್ಷ ಮಾಡುವುದು? ಪರಮಾತ್ಮ ಸರ್ವವ್ಯಾಪಿಯಾಗಿದ್ದಾರೆ ಎಂದು ಪ್ರಪಂಚದವರು ಹೇಳುತ್ತಾರೆ ಮತ್ತು ಸರ್ವವ್ಯಾಪಿ ಅಲ್ಲವೆಂದು ನೀವು ಹೇಳುತ್ತೀರಿ. ಆದರೆ ಬಾಪ್‌ದಾದಾ ಹೇಳುತ್ತಾರೆ - ಈಗ ಸಮಯದ ಪ್ರಮಾಣ ಪ್ರತಿಯೊಬ್ಬ ಶಿಕ್ಷಕಿಯರಲ್ಲಿ ತಂದೆಯು ಪ್ರತ್ಯಕ್ಷವಾಗಿ ಕಂಡುಬರಬೇಕು. ಆಗ ಸರ್ವವ್ಯಾಪಿಯಾಗಿ ಕಂಡುಬರುತ್ತಾರಲ್ಲವೆ!! ಯಾರನ್ನು ನೋಡಿದರೂ ಅವರಲ್ಲಿ ತಂದೆಯೇ ಕಂಡುಬರಬೇಕು. ಆತ್ಮ, ಪರಮಾತ್ಮನ ಮುಂದೆ ಮುಚ್ಚಿಹೋಗಿ ಪರಮಾತ್ಮ ಮಾತ್ರ ಕಂಡುಬರುತ್ತಾರೆ. ಇದಾಗುತ್ತದೆಯೇ? ಆಗುತ್ತದೆಯೇ? ಒಳ್ಳೆಯದು. ಇದರ ದಿನಾಂಕ ಏನಾಗಿದೆ? ದಿನಾಂಕವಂತೂ ನಿಗದಿ ಮಾಡಬೇಕಲ್ಲವೇ? ಇದರ ದಿನಾಂಕ ಯಾವುದಾಗಿದೆ? ಎಷ್ಟು ಸಮಯ ಬೇಕಾಗುತ್ತದೆ? (ಈಗಿನಿಂದಲೇ ಮಾಡುತ್ತೇವೆ) ಮಾಡುತ್ತೇವೆ ಎನ್ನುವುದು ಒಳ್ಳೆಯ ಧೈರ್ಯವೇ ಆಗಿದೆ. ಎಷ್ಟು ಸಮಯ ಬೇಕಾಗುತ್ತದೆ! 2002ನೇ ವರ್ಷ ನಡೆಯುತ್ತಿದೆ. ಇನ್ನೂ 2000 ವರ್ಷ ಎಲ್ಲಿಯತನಕ ಇದೆ? ಈಗ ಶಿಕ್ಷಕಿಯರು ತಂದೆಯ ಅಂತರಾಳದಲ್ಲಿ ಸಮಾವೇಶವಾಗಿರುವುದು ಕಂಡುಬರಬೇಕು ಮತ್ತು ನಿಮ್ಮ ಮುಖಾಂತರ ತಂದೆಯು ಕಂಡುಬರಬೇಕು. ಯೋಜನೆ ಮಾಡುತ್ತೀರಲ್ಲವೇ! ಡಬಲ್ ವಿದೇಶಿಯರು ಮೀಟಿಂಗ್ ಮಾಡುವುದರಲ್ಲಿ ತುಂಬಾ ಬುದ್ಧಿವಂತರಾಗಿದ್ದಾರೆಯೇ? ಈಗ ಈ ಮೀಟಿಂಗ್ ಮಾಡಬೇಕಾಗಿದೆ, ಹೇಗೆ ನಾವು ಒಬ್ಬೊಬ್ಬರು ತಂದೆಯನ್ನು ಪ್ರತ್ಯಕ್ಷ ಮಾಡುವುದೆಂದು ಮೀಟಿಂಗ್ ಮಾಡದೇ ಹಿಂತಿರುಗುವ ಹಾಗಿಲ್ಲ. ಈಗ ಬ್ರಹ್ಮಕುಮಾರಿಯರೇ ಕಂಡುಬರುತ್ತಿದ್ದಾರೆ ಮತ್ತು ಬ್ರಹ್ಮಾಕುಮಾರಿಯರು ಬಹಳ ಚೆನ್ನಾಗಿದ್ದಾರೆ. ಇನ್ನು ಇವರ ತಂದೆಯು ಎಷ್ಟು ಚೆನ್ನಾಗಿರಬೇಕೆಂದು ಅವರೇ ನೋಡಲಿ. ಆಗ ವಿಶ್ವ ಪರಿವರ್ತನೆ ಆಗುತ್ತದೆಯಲ್ಲವೆ? ಡಬಲ್ ವಿದೇಶಿಯರು ಈ ಯೋಜನೆಯನ್ನು ಪ್ರಾಕ್ಟಿಕಲ್ ಆಗಿ ಪ್ರಾರಂಭ ಮಾಡುತ್ತೀರಲ್ಲವೇ? ಮಾಡುತ್ತೀರಾ? ಪಕ್ಕಾ. ಒಳ್ಳೆಯದು. ನಿಮ್ಮ ದಾದಿ ಇದ್ದಾರಲ್ಲವೇ? ಅವರ ಆಸೆ ಪೂರ್ಣವಾಗುತ್ತದೆ. ಸರಿಯಾಗಿದೆಯಲ್ಲವೇ? ಒಳ್ಳೆಯದು. ಅದರ್ ಕುಮಾರರು ಮತ್ತು ಮಾತೆಯರು ಯಾರಾದರೆ ಒಂಟಿಯಾಗಿ ಇದ್ದೀರೋ ಅವರು ಎದ್ದು ನಿಲ್ಲಿರಿ.  ಒಳ್ಳೆಯದು, ನೀವು ಸಹ ಒಂಟಿಯಲ್ಲ ನಿಮ್ಮ ಜೀವನ ಸಂಗಾತಿ ಬಹಳ ಸರ್ವ ಶಕ್ತಿವಂತನು. ಏಕೆಂದರೆ ಬಾಪ್‌ದಾದಾ ಮಕ್ಕಳೆಲ್ಲರಿಗೂ ಹೇಳುತ್ತಿದ್ದಾರೆ ನೀವೆಲ್ಲರೂ ಅರ್ಥಾತ್ ನೀವು ಮತ್ತು ತಂದೆ ಕಂಬೈನ್ಡ್ ಆಗಿ

ಇದ್ದಾಗ ಯಾರು ಸಹ ಬೇರೆ ಮಾಡಲಾಗುವುದಿಲ್ಲ. ಅಷ್ಟು ಕಂಬೈನ್ಡ್ ಆಗಿ ಇದ್ದೀರಲ್ಲವೇ, ಅಥವಾ ಕಂಬೈನ್ಡ್ ಅಲ್ಲವೇ? ನಿಮ್ಮ ಪ್ರತಿಯೊಂದು ಕಾರ್ಯದಲ್ಲಿ ಸದಾ ತಂದೆ ನಿಮಗೆ ಸಹಯೋಗಿಯಾಗುತ್ತಾರೆ ನಿಮ್ಮ ಜೊತೆಯೇ ಇರುತ್ತಾರೆ. ಈ ನಶೆ ಇರುತ್ತದೆಯೇ? ಸದಾ ಪ್ರತಿಯೊಂದು ಕಾರ್ಯದಲ್ಲಿ ತಂದೆಗೆ ಸಹಯೋಗಿ ಸಾಥಿಗಳಾಗಿದ್ದೀರಿ ಎಂಬ ಈ ನಶೆ ಇರುತ್ತದೆ ಅಲ್ಲವೇ! ಯಾವಾಗಲೂ ನಿಮ್ಮನ್ನು ನೀವು ಒಂಟಿಯಾಗಿ ಭಾವಿಸುತ್ತಿಲ್ಲ ತಾನೇ! ಆಗಾಗ ಭಾವಿಸುತ್ತಿದ್ದೀರಾ, ಇಲ್ಲ ತಾನೇ! ಮೊದಲು ಬಾಪ್‌ದಾದಾ ನಿಮ್ಮೆಲ್ಲರ ಸಾಥಿ ಮತ್ತು ಜೊತೆಯನ್ನು ನಿಭಾಯಿಸುತ್ತಿದ್ದರು. ಬಾಬಾ ಅಂದಾಕ್ಷಣ ತಂದೆ ಹಾಜರಾಗಿ ಬಿಡುತ್ತಾರೆ. ಮೋಜಿನಲ್ಲಿ ಇದ್ದೀರಲ್ಲವೇ? ಉದಾಸೀನವಾಗುತ್ತಿಲ್ಲ ತಾನೇ? ಆಗುತ್ತಿದ್ದೀರಾ? ಹೌದು ಅಥವಾ ಇಲ್ಲ ಎಂದು ಹೇಳುತ್ತಿಲ್ಲ. ಉದಾಸೀನವಾಗಿ ಇಲ್ಲ ತಾನೇ! ಮೋಜಿನಲ್ಲಿ ಇದ್ದೀರಿ ತಾನೇ, ನಾವು ತಂದೆಯವರು ತಂದೆ ನಮ್ಮವರು ಎಂಬ ಮೋಜೇ ಮೋಜಿನಲ್ಲಿ ಇರುತ್ತಿದ್ದೀರಲ್ಲವೇ? ತಂದೆ ನಿಮ್ಮ ಪ್ರತಿಯೊಂದು ಸೇವೆಗೆ ಸಹಯೋಗವನ್ನು ಕೊಡುತ್ತಾರೆ. ಆದ್ದರಿಂದ ತಂದೆ ಮತ್ತು ನಾನು ಕಂಬೈನ್ಡ್ ಎಂಬ ಆತ್ಮಿಕ ನಶೆಯಲ್ಲಿ ಸದಾ ಇರಿ. ಕಂಬೈನ್ಡ್ ಅಲ್ಲವೇ, ಬಹಳ ಒಳ್ಳೆಯ ಆತ್ಮಿಕ ನಶೆ ಇರುವವರು, ನಶೆ ಇದೆ ಅಲ್ಲವೇ ನೀವು ಬಾಪ್‌ದಾದಾರವರಿಗೆ ಅತಿಪ್ರಿಯಕ್ಕಿಂತಲೂ ಅತಿಪ್ರಿಯವಾದವರು. ಚಿಕ್ಕ ಮಕ್ಕಳೊಂದಿಗೆ: ಮಕ್ಕಳಿಗೆ ಕಾರ್ಡ್ ಲಭಿಸಿದೆಯಲ್ಲವೇ, ಕೇಳಿದ್ದೀರಾ ಮಕ್ಕಳು! ಒಳ್ಳೊಳ್ಳೆಯ ಕಾರ್ಡುಗಳಿವೆ. ಬಹಳ ಒಳ್ಳೆಯ ಕಾರ್ಡುಗಳನ್ನು ಬರೆದಿದ್ದೀರಿ. ಮಕ್ಕಳ ಅದ್ಭುತವನ್ನು ನೋಡಿದ್ದೀರಲ್ಲವೇ? ಮಕ್ಕಳ ಲಗನ್ ಚೆನ್ನಾಗಿದೆ ಆದ್ದರಿಂದಲೇ ಇಲ್ಲಿಗೆ ಬಂದಿದ್ದಾರೆ. ಮಕ್ಕಳಿಗೆ ತಂದೆಯ ಮೇಲಿರುವ ಪ್ರೀತಿ ಮುಂದಕ್ಕೆ ನಡೆಸುತ್ತಾ ಇರುತ್ತದೆ.

(ಮೊದಲ ಬಾರಿ ಬಂದಿರುವವರು ಬಹಳಷ್ಟು ಜನರಿದ್ದಾರೆ) ಒಳ್ಳೆಯದು. ಕೈಯನ್ನು ಎತ್ತಿರಿ. ಮೊದಲ ಬಾರಿ ಬಂದಿರುವವರು ಮೊದಲ ನಂಬರ್ ನಲ್ಲಿ ಹೋಗಬೇಕು. ಲಾಸ್ಟ್ ನಿಂದ ಫಾಸ್ಟ್ ಆಗಬೇಕು. ಮೊದಲ ನಂಬರ್ ಪಡೆಯಬೇಕು. ಹಾಗಾದರೆ ಇನ್ನೂ ವೇಗವಾಗಿ ಹೋಗುತ್ತೀರಲ್ಲವೇ. ಇಡೀ ಬ್ರಾಹ್ಮಣ ಪರಿವಾರದವರೆಲ್ಲರೂ ಮೊದಲ ಬಾರಿಗೆ ಬಂದಿರುವ ನಿಮ್ಮೆಲ್ಲರಿಗೆ ಬಹಳ ಬಹಳ ಬಹಳ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಭಾರತವಾಸಿಯರು ಕುಳಿತು ಕೊಂಡಿದ್ದೀರಿ. ಅವರು ಎದ್ದು ನಿಲ್ಲಿರಿ. ಭಾರತದೇಶ ಮಹಾನ್ ದೇಶ ಆದ್ದರಿಂದ ಭಾರತವಾಸಿಯರು ಸಹ ಮಹಾನ್ ಆತ್ಮರು. ಭಾರತ ದೇಶವೆಂದರೆ ತಂದೆಗೆ ಪ್ರೀತಿ. ಆದ್ದರಿಂದಲೇ ಭಾರತ ದೇಶದಲ್ಲಿಯೇ ಬರುತ್ತಾರೆ. ವಿದೇಶದಲ್ಲಿ ಬರಲಿಲ್ಲ. ಭಾರತ ದೇಶದಲ್ಲಿಯೇ ಬಂದಿದ್ದಾರೆ. ಆದರೆ ವಿದೇಶಿಯರು ಭಾರತವಾಸಿಯರನ್ನು ಜಾಗೃತಗೊಳಿಸಲು ನಿಮಿತ್ತರಾಗುತ್ತಾರೆ. ಭಾರತವಾಸಿಯರಂತೂ ಅವಕಾಶ ತೆಗೆದುಕೊಳ್ಳುವುದರಲ್ಲಿ ಬುದ್ಧಿಯುಳ್ಳವರು. ಡಬಲ್ ವಿದೇಶಿಯರ ಮಿಲನದಲ್ಲಿಯೂ ಸಹ ಎಷ್ಟು ಜನ ಭಾರತವಾಸಿಯರು ಬಂದಿದ್ದಾರೆ ನೋಡಿರಿ. ಆದ್ದರಿಂದ ಈಗ ಭಾರತವಾಸಿಯರ ಮಿಲನದಲ್ಲಿ ಡಬಲ್ ವಿದೇಶೀಯರಿಗೆ ಸಹ ಆಹ್ವಾನವಿದೆ. ಸ್ವಾಗತ. ಡಬಲ್ ವಿದೇಶಿಯರು ಅಲ್ಲಿಗೆ ಹೋಗುತ್ತಲೇ ಮೊದಲೇ ಟಿಕೆಟ್ಗಾಗಿ ಹಣವನ್ನು ಜಮಾ ಮಾಡಿಕೊಳ್ಳುತ್ತಾರೆ. ಮದುವನವೆಂದರೆ ಪ್ರೀತಿ ಇದೆ ಅಲ್ಲವೇ! ಮದುಬನ ಅಥವಾ ಭಾರತ ದೇಶವೆಂದರೆ ನಮಗೆ ಇಷ್ಟ ಎಂದು ಹೇಳುತ್ತಾರೆ. ಏಕೆ? ಏಕೆಂದರೆ ವಾಸ್ತವವಾಗಿ ಸೇವೆಯ ಕಾರಣಕ್ಕಾಗಿ ವಿದೇಶಗಳಿಗೆ ಹೋಗಿದ್ದೀರಿ. ಒಂದು ವೇಳೆ ನೀವು ಯಾವಾಗಲೋ ಒಮ್ಮೆ ಭಾರತವಾಸಿಯರು ಆಗದಿದ್ದರೆ ಭಾರತ ದೇಶದ ಚರಿತ್ರೆಯ ಮೇಲೂ ಸಹ ನಿಮಗೆ ಪ್ರೀತಿ ಇರುವುದಿಲ್ಲ. ಭಾರತ ದೇಶದ ಸಂಸ್ಕೃತಿಯ ಮೇಲೂ ಸಹ ನಿಮಗೆ ಪ್ರೀತಿ ಇರುವುದಿಲ್ಲ ಆದರೆ ನಿಮಗೆ ಪ್ರೀತಿ ಇದೆ ಅರ್ಥಾತ್ ನೀವು ಭಾರತವಾಸಿಯರೇ. ಕೇವಲ ವಿಶ್ವ ಸೇವಾರ್ಥ

ಅಲ್ಲಿಗೆ ಹೋಗಿದ್ದೀರಿ. ವಿಶ್ವ ಸೇವಾರ್ಥ ಬೇರೆ ಬೇರೆ ಸ್ಥಾನಗಳಿಗೆ ಹೋಗಿದ್ದೀರಿ. ಭಾಷೆಗಳು ಸಹ ಎಷ್ಟು ಇವೆಯೋ ನೋಡಿರಿ. ಭಾರತದೇಶದವರು ಸೇವೆ ಮಾಡಬೇಕೆಂದರೆ ಆ ಭಾಷೆಗಳನ್ನು ಕಲಿಯಬೇಕಾಗುತ್ತದೆ ಆದ್ದರಿಂದ ಸೇವೆಗಾಗಿಯೇ ನಿಮಗೆ ಅಲ್ಲಿ ಜನ್ಮ ಲಭಿಸಿದೆ. ಆದಿಯಲ್ಲಿ ಅರ್ಥಾತ್ ಸತ್ಯಯುಗದಲ್ಲಿ ಭಾರತ ದೇಶದಲ್ಲಿಯೇ ಇರುತ್ತಿದ್ದೀರಿ. ಈಗ ಸ್ವಲ್ಪ ಸಮಯಕ್ಕಾಗಿ ಸೇವೆಗಾಗಿ ವಿದೇಶಕ್ಕೆ ಹೋಗಿದ್ದೀರಿ. ನಾವು ಭಾರತೀಯರೇ ಎಂಬ ನಶೆ ಇದೆಯಲ್ಲವೇ? ಖುಷಿ ಇದೆ ಅಲ್ಲವೇ? ಇಷ್ಟಕ್ಕೂ ಮುಂಚೆಯೂ ಭಾರತೀಯರೇ, ಈಗಲೂ ಭಾರತೀಯರೇ ಮತ್ತು ಇನ್ನು ಮುಂದೆ ಸಹ ಭಾರತ ವಾಸಿಯರೇ, ಪ್ರತಿಯೊಂದು ಕಲ್ಪದಲ್ಲಿ ಆಗುತ್ತೀರಿ. ಒಳ್ಳೆಯದು.

(ಪಾಂಡವ ಭವನದಲ್ಲಿ ಬಹಳಷ್ಟು ಜನ ಕುಳಿತುಕೊಂಡಿದ್ದಾರೆ, ಜ್ಞಾನ ಸರೋವರ, ಶಾಂತಿವನ ಎಲ್ಲಾ ಜಾಗದಲ್ಲಿ ಕುಳಿತು ಕೇಳುತ್ತಿದ್ದಾರೆ) ವಿಜ್ಞಾನದ ಲಾಭವನ್ನು ನೀವು ಪಡೆಯುತ್ತಿದ್ದೀರಿ. ವಿಜ್ಞಾನ ನಿಮಗಾಗಿಯೇ ತಯಾರಾಗಿದೆ. ಸ್ಥಾಪನೆಯ ಪಾತ್ರಕ್ಕೆ ಸ್ವಲ್ಪ ಸಮಯದ ಮೊದಲೇ ವಿಜ್ಞಾನದ ಆವಿಷ್ಕರಣಗಳು ತೀವ್ರಗತಿಯಾಗಿದೆ. ಪ್ರಜೆಗಳು ವಿಜ್ಞಾನದಿಂದ ಲಾಭವನ್ನು ಪಡೆಯುತ್ತಿದ್ದರೂ, ನಷ್ಟವನ್ನು ಪಡೆಯುತ್ತಿದ್ದರೂ ನೀವು ಮಾತ್ರ ಲಾಭವೇ ಪಡೆಯುತ್ತಿದ್ದೀರಲ್ಲವೇ! ಆದ್ದರಿಂದ ಬಾಪ್‌ದಾದಾ ವಿಜ್ಞಾನ ಸಾಧನಗಳನ್ನು ಕೊಡುವವರಿಗೂ ಸಹ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಕೆಳಗೆ ಕೂಡ ವಿಶ್ರಾಂತಿಯಿಂದ ಕೇಳುತ್ತಿದ್ದಾರೆ. ವಿದೇಶಗಳಲ್ಲಿಯೂ ಸಹ ಕೆಲವು ಜನ ಕೇಳುತ್ತಿದ್ದಾರೆ. ಮೋಹಿನಿ ಅಕ್ಕನವರು(ನ್ಯೂಯಾರ್ಕ್) ಮತ್ತು ಚಂದು ಅಕ್ಕನವರೂ ಕೂಡ ಕೇಳುತ್ತಿದ್ದಾರೆ. ಒಳ್ಳೆಯದು, ಏನೇ ಬಂದರೂ ಅರ್ಥಾತ್ ಶಾರೀರಿಕ ರೋಗಗಳು ಬಂದರೂ ಸೇವೆಗೆ ಅವಕಾಶ ಬಂದಾಗ ಎರಡನ್ನು ತಮ್ಮ ಶಕ್ತಿಯಿಂದ ದಾಟಿ ವಿಜಯೀ ಆಗುತ್ತಿದ್ದಾರೆ. ಶಾರೀರಿಕ ರೋಗವೆಂಬುವುದು ಸಹ ಒಂದು ಪರೀಕ್ಷೆ, ಇತರ ಪರೀಕ್ಷೆಗಳಲ್ಲಿ ಹೇಗಾದರೆ ಪಾಸಾಗುತ್ತಿದ್ದಿರೋ ಇದು ಸಹ ಒಂದು ಪರೀಕ್ಷೆ ಇದರಲ್ಲಿಯೂ ಸಹ ಪಾಸ್ ಆಗುತ್ತಾ ಇದ್ದೀರಿ ಮತ್ತು ಸಹಜವಾಗಿ ಪಾಸ್ ಆಗುತ್ತಿದ್ದೀರಿ. ಮದುಬನ ನಿವಾಸಿಯರು ಎಲ್ಲರಿಗಿಂತಲೂ ಬಾಪ್‌ದಾದಾ ಶಾಂತಿವನದವರಿಗೆ, ಹಾಸ್ಪಿಟಲ್ ನವರಿಗೆ, ಇಲ್ಲಿನ ಅಬು ನಿವಾಸಿಯರನ್ನು, ಜ್ಞಾನ ಸರೋವರದ ನಿವಾಸಿಯರನ್ನು ಎಲ್ಲರನ್ನು ಮದುಬನದ ನಿವಾಸಿಯರು ಎನ್ನುತ್ತಾರೆ. ಇಲ್ಲಿ ಒಳ್ಳೆಯ ಪುಣ್ಯವನ್ನು ಜಮಾ ಮಾಡಿಕೊಂಡಿದ್ದಾರೆ. ಇತರರಿಗೆ ಅವಕಾಶವನ್ನು ಕೊಟ್ಟಿದ್ದಾರೆ. ಅವಕಾಶವನ್ನು ಕೊಡುವುದರಿಂದಲೂ ಸಹ ನಿಮಗೆ ಪುಣ್ಯದ ಖಾತೆ ಜಮಾ ಆಗಿಬಿಡುತ್ತದೆ. ವಿಶ್ರಾಂತಿಯಾಗಿ ಕುಳಿತು ಕೇಳುತ್ತಿದ್ದಾರೆ. ಯಾರಾದರೆ ಕೆಳಗೆ ಕುಳಿತುಕೊಂಡು ಕೇಳುತ್ತಿದ್ದಾರೆಯೋ ಅವರನ್ನು ಬಾಪ್‌ದಾದಾ ಸಹ ಮೊದಲು ಸ್ಮೃತಿ ಮಾಡುತ್ತಿದ್ದಾರೆ. ಅವರೊಂದಿಗೆ ಜೊತೆಜೊತೆಗೆ ಯಾರಾದರೆ ವಿದೇಶದಲ್ಲಿ ಕೇಳುತ್ತಿದ್ದಾರೆಯೋ ಅವರನ್ನು, ಯಾರಾದರೆ ದೂರದಲ್ಲಿ ಕುಳಿತು ಕೇಳುತ್ತಿದ್ದಾರೆಯೋ ಅವರನ್ನು, ಭಾರತ ದೇಶದಲ್ಲಾದರೂ ವಿದೇಶದಲ್ಲಿ ಆದರೂ ಮೊದಲು ಅವರನ್ನು ಸ್ಮೃತಿ ಮಾಡುತ್ತಿದ್ದಾರೆ ಮತ್ತು ಜೊತೆ ಜೊತೆ ಮಕ್ಕಳೆಲ್ಲರೂ ಯಾರಾದರೆ ಕಾರ್ಡುಗಳು, ಪತ್ರಗಳನ್ನು ಕಳುಹಿಸಿದ್ದಾರೆಯೋ ಅವರೆಲ್ಲರ ಪತ್ರಗಳು, ಕಾರ್ಡುಗಳು, ಮನಸ್ಸಿನ ಸಮಾಚಾರ, ಸೇವೆಯ ಸಮಾಚಾರ, ಧೈರ್ಯದ ಸಮಾಚಾರ ಎಲ್ಲವೂ ತಂದೆಯ ಹತ್ತಿರ ತಲುಪಿದೆ ಮತ್ತು ರಿಟರ್ನ್ ನಲ್ಲಿ ಬಾಪ್‌ದಾದಾ ಪ್ರತಿಯೊಬ್ಬ ಮಗುವಿನ ಹೆಸರು ಹೆಸರಿನಿಂದ ಮನಸ್ಸಿನಲ್ಲಿ ಬಹಳ ಬಹಳ ಪ್ರಿಯಸ್ಮೃತಿಗಳನ್ನು ಕೊಡುತ್ತಿದ್ದಾರೆ. ಬಹಳ ಪ್ರೀತಿಯ ಉತ್ತರಗಳನ್ನು ಬರೆಯುತ್ತಿದ್ದಾರೆ. ಎಷ್ಟು ಖರ್ಚು ಮಾಡುತ್ತಿದ್ದಾರೆ ಎಷ್ಟು ಶ್ರೇಷ್ಠ ಕಾರ್ಡುಗಳನ್ನು ಕಳುಹಿಸುತ್ತಿದ್ದಾರೆ. ಆದರೆ ಬಾಪ್‌ದಾದಾ ಖರ್ಚನ್ನು ನೋಡುತ್ತಿಲ್ಲ. ಅವರ ಪ್ರೀತಿಯನ್ನು ನೋಡುತ್ತಿದ್ದಾರೆ. ಪ್ರೀತಿಯ ಮುಂದೆ ಬೇರೆ ಯಾವುದೇ ಶ್ರೇಷ್ಠವಸ್ತು ಇಲ್ಲ. ಒಳ್ಳೆಯದು.

(ಹಾಸ್ಪಿಟಲ್ ಗಾಗಿ ನಿಮಿತ್ತವಾದವರು ಸಹ ಬಂದಿದ್ದಾರೆ) ಒಳ್ಳೆಯದು. ಈ ಹಾಸ್ಪಿಟಲ್ ಸಹ ವಿಶ್ವದಲ್ಲಿ ಧ್ವನಿಯನ್ನು ವ್ಯಾಪಿಸಲು ಒಳ್ಳೆಯ ಸಾಧನವಾಗಿದೆ. ಏಕೆಂದರೆ ಇದರಲ್ಲಿ ಡಬಲ್ ಲಾಭ ಲಭಿಸುತ್ತದೆ. ಒಂದು ಶರೀರಕ್ಕೆ ಮತ್ತು ಎರಡು ಆತ್ಮನಿಗೆ ಕೂಡ ಲಾಭವು ಲಭಿಸುತ್ತದೆ. ಆದ್ದರಿಂದ ಬಾಪ್‌ದಾದಾ ಹಾಸ್ಪಿಟಲ್ ನಲ್ಲಿ ಯಾರಾದರೆ ನಿಮಿತ್ತರಾಗಿದ್ದಾರೆಯೋ ಅಥವಾ ಸೇವಾಧಾರಿಯಾಗಿದ್ದಾರೆಯೋ ಅವರೆಲ್ಲರಿಗೆ ವಿಶೇಷ ಸೇವೆಯ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಇದು ಹೆಸರಿಗೆ ಹಾಸ್ಪಿಟಲ್ ಆದರೆ ಆತ್ಮರನ್ನು ತಂದೆಯೊಂದಿಗೆ ಮಿಲನ ಮಾಡಿಸಲು ಸಾಧನವಾಗಿದೆ. ಹಾಸ್ಪಿಟಲ್ ಎಂಬ ಹೆಸರಿನಿಂದ ಸಹಜವಾಗಿ ಎಲ್ಲರೂ ಬರುತ್ತಿದ್ದಾರೆ ಎಲ್ಲರೂ ಚೆನ್ನಾಗಿ ನಡೆಯುತ್ತಿದ್ದೀರಲ್ಲವೇ? ಎಲ್ಲೆಲ್ಲಿ ಹಾಸ್ಪಿಟಲ್ಸ್ ಇವೆಯೋ ಅವೆಲ್ಲವೂ ಚೆನ್ನಾಗಿ ನಡೆಯುತ್ತಿವೆ ಅಲ್ಲವೇ! ಬಾಂಬೆ ಹಾಸ್ಪಿಟಲ್ ಚೆನ್ನಾಗಿ ನಡೆಯುತ್ತಿದೆಯೇ? ಗ್ಲೋಬಲ್ ಹಾಸ್ಪಿಟಲ್ನ ಹೆಸರಂತೂ ಪ್ರಸಿದ್ಧವಾಗಿ ಬಿಟ್ಟಿದೆ. ಬಹಳ ಒಳ್ಳೆಯದು. ಶುಭಾಶಯಗಳು. ವಿದೇಶದ ಹಳೆಯ ಅಣ್ಣಂದಿರು ಅಕ್ಕಂದಿರೊಂದಿಗೆ: ಆದಿರತ್ನಗಳಲ್ಲವೇ! ವಿದೇಶಿ ಸೇವೆಯ ಆದಿರತ್ನಗಳು ಬಹಳ ಒಳ್ಳೆಯ ಸೇವಾದಾರರು ಎಂದು ಬಾಪ್‌ದಾದಾರವರಿಗೂ ಸಹ ಖುಷಿ ಇರುತ್ತದೆ. ದಣಿವರಿಯದವರು ಮತ್ತು ಮುಂದಕ್ಕೆ ಹೋಗುವವರು ಸಹ(25 ವರ್ಷಗಳಿಂದ ಜ್ಞಾನದಲ್ಲಿ ಇರುವವರು ಕುಳಿತುಕೊಂಡಿದ್ದಾರೆ) ದೊಡ್ಡದಾಗಿ ಕೈಯನ್ನು ಎತ್ತಿರಿ, ಒಳ್ಳೆಯದು.

ಅಮರ ಭವ!ದ ವರದಾನಿಗಳು, ಜನ್ಮದಿಂದಲೇ ಅಮರತ್ವದ ವರದಾನವು ಲಭಿಸಿದೆ. ಅಮರವಾಗಿ ಇದ್ದೀರಿ. ಅಮರವಾಗಿಯೇ ಇರುತ್ತೀರಿ. ಒಳ್ಳೆಯದು. ಎಲ್ಲರೊಂದಿಗೆ ಮಿಲನವಾಯಿತೇ ಅಥವಾ ಯಾರಾದರೂ ಉಳಿದುಕೊಂಡಿದ್ದೀರಾ?

ಸಿಂಧ್ ದೇಶದ ಗ್ರೂಪ್ ಉಳಿದುಬಿಟ್ಟಿದೆ. ಸಿಂಧ್ ಗ್ರೂಪ್ ಈಗ ಬ್ರಾಹ್ಮಣ ಗ್ರೂಪ್ ಆಗಿಬಿಟ್ಟಿದೆ. ಈಗ ನಿಮ್ಮನ್ನು ನೀವು ಸಿಂಧಿನವರಾಗಿ ಭಾವಿಸುತ್ತಿದ್ದೀರಾ ಅಥವಾ ಬ್ರಾಹ್ಮಣರಾಗಿ ಭಾವಿಸುತಿದ್ದೀರಾ? ಏನೆಂದು ಭಾವಿಸುತ್ತಿದ್ದೀರಿ. ಆದರೆ ಎಲ್ಲಿಂದ ಬ್ರಹ್ಮಾ ತಂದೆ ಬಂದಿದ್ದಾರೆಯೋ ಅಲ್ಲಿಯವರು ನಾವು ಎಂಬ ನಶೆ ಅಂತೂ ಇದೆ. ಈ ನಶೆ ಒಳ್ಳೆಯದೇ ಆದರೆ ಈಗ ಬ್ರಾಹ್ಮಣ ಪರಿವಾರದ ವಿಶೇಷ ಸೇವಧಾರಿ ಆತ್ಮರು. ಸೇವಾಧಾರರೇ ತಾನೇ! ಇಡೀ ಗ್ರೂಪ್ ಗೆ ಸೇವೆಯ ಇಚ್ಛೆ ಇದೆ ಆದರೆ ಬಾಪ್‌ದಾದಾರವರಿಗೆ ತಿಳಿದಿದೆ ಮತ್ತು ನಿಧಾನವಾಗಿ ಸಿಂಧ್ ಗ್ರೂಪನ್ನು ಹೆಚ್ಚಿಸುತ್ತಿದ್ದಾರೆ. ಹೆಚ್ಚುತ್ತಲೇ ಇರುತ್ತದೆ. ಆದ್ದರಿಂದಲೇ ಎಲ್ಲರಿಗೂ ಡಬಲ್ ಶುಭಾಶಯಗಳು. 1. ಸಿಂಧನವರಾದ್ದರಿಂದ ಮತ್ತು 2. ಬ್ರಾಹ್ಮಣ ಜೀವನದ ಶುಭಾಶಯಗಳು. ಎಲ್ಲರೂ ಪಕ್ಕಾ ಆಗಿ ಇದ್ದೀರಾ ಬಾಪ್‌ದಾದಾ ನೋಡಿ ಖುಷಿ ಪಡುತ್ತಿದ್ದಾರೆ. ಒಳ್ಳೆಯದು.

ಡಬಲ್ ವಿದೇಶಿಯರು ನೋಡಿ ಎಷ್ಟೊಂದು ಸೇವಾಧಾರಿಗಳಾಗಿದ್ದಾರೆ, ನಿಮ್ಮೆಲ್ಲರ ಕಾರಣ ಎಲ್ಲರಿಗೂ ನೆನಪು ಪ್ರೀತಿ ಸಿಗುತ್ತಿದೆ. ಬಾಪ್‌ದಾದಾರವರಿಗೂ ಡಬಲ್ ವಿದೇಶಿಯರ ಜೊತೆ ಜಾಸ್ತಿ ಎಂದು ಹೇಳುವುದಿಲ್ಲ, ಆದರೆ ಪ್ರತ್ಯೇಕ ಪ್ರೀತಿ ಇದೆ. ಏಕೆ ಪ್ರೀತಿ ಇದೆ? ಏಕೆಂದರೆ ಸೇವೆಗೆ ನಿಮಿತ್ತರಾದ ಡಬಲ್ ವಿದೇಶಿ ಆತ್ಮರು ವಿಶ್ವದ ಮೂಲೆ-ಮೂಲೆಯಲ್ಲೂ ತಂದೆಯ ಸಂದೇಶವನ್ನು ತಲುಪಿಸಲು ನಿಮಿತ್ತರಾಗಿದ್ದಾರೆ. ಇಲ್ಲದಿದ್ದರೆ ವಿದೇಶಿ ಆತ್ಮರು ನಾಲ್ಕಾರೂ ಕಡೆ ಬಾಯಾರಿಕೊಂಡು ಇರುತ್ತಾರೆ. ಈಗ ಭಾರತದಲ್ಲಿ ಬಂದರು ಎಂದು ತಂದೆಗೆ ದೂರು ಮಾಡುವುದಿಲ್ಲ ತಾನೆ, ವಿದೇಶದಲ್ಲಿ

ಏಕೆ ಸಂದೇಶ ಕೊಟ್ಟಿಲ್ಲ ಎಂದು ತಂದೆಗೆ ಬರುವ ದೂರನ್ನು ಪೂರ್ಣ ಮಾಡುವುದರಲ್ಲಿ ನಿಮಿತ್ತರಾಗಿದ್ದೀರಿ ಮತ್ತು ಜಾನಕಿದಾದಿಯವರಿಗೆ ಯಾವುದೇ ದೇಶ ಉಳಿದುಕೊಳ್ಳಬಾರದು ಎಂದು ಬಹಳಷ್ಟು ಉತ್ಸಾಹ ಇದೆ. ಒಳ್ಳೆಯದು. ತಂದೆಯ ದೂರನ್ನು ಪೂರ್ಣ ಮಾಡುತ್ತಿದ್ದೀರಲ್ಲವೇ! ಆದರೆ ನೀವೆಲ್ಲಾ ಜೊತೆಗಾರರಿಗೆ ಬಹಳ ಸುಸ್ತು ಮಾಡುತ್ತಾರೆ! ಸುಸ್ತು ಮಾಡಿಸುತ್ತಾರಲ್ಲವೇ. ಜಯಂತಿ, ಸುಸ್ತಾಗಿಲ್ಲವೇ? ಆದರೆ ಈ ಸುಸ್ತಿನಲ್ಲೂ ಮೋಜು ಸಮಾವೇಶವಾಗಿದೆ. ಇದು ಪದೆ-ಪದೇ ಏಕೆ ಎಂದು ಪ್ರಶ್ನೆ ಬರುತ್ತಿತ್ತು, ಆದರೆ ಯಾವಾಗ ಭಾಷಣ ಮಾಡಿ ಆಶೀರ್ವಾದಗಳನ್ನು ಪಡೆದುಕೊಳ್ಳುತ್ತೀರೋ ಆಗ ಚೆಹರೆ ಬದಲಾಗುತ್ತದೆ. ಒಳ್ಳೆಯದು. ಇಬ್ಬರೂ ದಾದಿಯರಲ್ಲಿ ಉತ್ಸಾಹ ಉಲ್ಲಾಸವನ್ನು ಹೆಚ್ಚಿಸುವಂತಹ ವಿಶೇಷತೆ ಇದೆ. ಇವರು ಶಾಂತವಾಗಿ ಕುಳಿತುಕೊಳ್ಳುವುದಿಲ್ಲ. ಸೇವೆಯಂತೂ ಇನ್ನೂ ಉಳಿದಿದೆಯಲ್ಲವೇ? ಒಂದುವೇಳೆ ಭೂಪಟವನ್ನು ತೆಗೆದು ನೋಡಿ. ಭಾರತದಲ್ಲಿಯೇ ಆಗಲಿ ಅಥವಾ ದೇಶದಲ್ಲಿಯೇ ಆಗಲಿ ಭೂಪಟದಲ್ಲಿ ಒಂದೊಂದು ಸ್ಥಾನವನ್ನು ಗುರುತು ಮಾಡುತ್ತಾ ಹೋದಲ್ಲಿ ಇನ್ನೂ ಉಳಿದಿರುವ ಸ್ಥಾನಗಳು ಕಂಡುಬರುತ್ತವೆ ಆದ್ದರಿಂದ ಬಾಪ್‌ದಾದಾ ಖುಷಿಪಡುತ್ತಾರೆ ಮತ್ತು ಹೆಚ್ಚು ಸುಸ್ತಾಗಬೇಡಿರೆಂದೂ ಸಹ ಹೇಳುತ್ತಾರೆ. ನೀವೆಲ್ಲರೂ ಸೇವೆಯಲ್ಲಿ ಖುಷಿಯಾಗಿದ್ದೀರಲ್ಲವೇ? ಈಗ ಈ ಎಲ್ಲಾ ಕುಮಾರಿಯರೂ ಸಹ ಶಿಕ್ಷಕಿಯರಾಗುತ್ತಾರಲ್ಲವೇ? ಯಾರು ಶಿಕ್ಷಕಿಯರಿದ್ದಾರೆ, ಅವರು ಆಗಿಯೇ ಇದ್ದಾರೆ ಆದರೆ ಯಾರು ಶಿಕ್ಷಕಿಯರಾಗಿಲ್ಲವೋ ಅವರು ಶಿಕ್ಷಕಿಯರಾಗಿ ಒಂದಲ್ಲ ಒಂದು ಸೇವಾಕೇಂದ್ರವನ್ನು ಸಂಭಾಲನೆ ಮಾಡುತ್ತಾರಲ್ಲವೇ. ಭುಜಗಳಾಗುತ್ತಾರಲ್ಲವೇ. ಡಬಲ್ ವಿದೇಶಿ ಮಕ್ಕಳಿಗೆ ಎರಡೂ ಕೆಲಸವನ್ನು ಮಾಡಿ ಅಭ್ಯಾಸವಿದ್ದೇ ಇದೆ. ನೌಕರಿಯನ್ನೂ ಸಹ ಮಾಡುತ್ತಾರೆ ಮತ್ತು ಸೇವಾಕೇಂದ್ರವನ್ನೂ ಸಹ ಸಂಭಾಲನೆ ಮಾಡುತ್ತಾರೆ. ಆದ್ದರಿಂದ ಬಾಪ್‌ದಾದಾ ಡಬಲ್ ಅಭಿನಂದನೆಗಳನ್ನು ಕೊಡುತ್ತಾರೆ. ಒಳ್ಳೆಯದು.

**ನಾಲ್ಕೂ ಕಡೆಯಲ್ಲಿರುವಂತಹ ಅತೀ ಸ್ನೇಹೀ, ಅತೀ ಸಮೀಪ ಸದಾ ಆದಿಕಾಲದಿಂದ ಇದುವರೆಗೂ ಘನತೆಯ ಅಧಿಕಾರಿಗಳು, ಸದಾ ತನ್ನ ಚಹರೆ ಮತ್ತು ಚಲನೆಯಿಂದ ಪವಿತ್ರತೆಯ ಹೊಳಪನ್ನು ತೋರಿಸುವಂತಹ, ಸದಾ ಸ್ವಯಂನ್ನು ಸೇವೆ ಮತ್ತು ನೆನಪಿನಲ್ಲಿ ತೀವ್ರ ಪುರುಷಾರ್ಥದ ಮೂಲಕ ನಂಬರ್‌ವನ್ ಆಗುವಂತಹ, ಸದಾ ತಂದೆಯ ಸಮಾನ ಸರ್ವಶಕ್ತಿ, ಸರ್ವಗುಣ ಸಂಪನ್ನ ಸ್ವರೂಪದಲ್ಲಿರುವಂತಹ, ಇಂತಹ ಎಲ್ಲಾ ಕಡೆಯ ಪ್ರತಿಯೊಂದು ಮಗುವಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ವಿದೇಶದ ಮುಖ್ಯ ಶಿಕ್ಷಕಿ ಸಹೋದರಿಯರೊಂದಿಗೆ: ಎಲ್ಲರೂ ಸೇವೆಯ ಯೋಜನೆ ಒಳ್ಳೊಳ್ಳೆಯದನ್ನು ಮಾಡಿದ್ದೀರಲ್ಲವೆ ಏಕೆಂದರೆ ಸೇವೆ ಸಮಾಪ್ತಿಯಾಗಲಿ. ಆಗ ನಿಮ್ಮ ರಾಜ್ಯವು ಬರುತ್ತದೆ. ಸೇವೆಯ ಸಾಧನವೂ ಸಹ ಅವಶ್ಯಕವಾಗಿದೆ. ಆದರೆ ಮನಸ್ಸು ಮತ್ತು ಮಾತು ಎರಡೂ ಜೊತೆಜೊತೆಯಿರಲಿ ಸೇವೆ ಮತ್ತು ಸ್ವ ಉನ್ನತಿ ಜೊತೆಯಿರಲಿ. ಇಂತಹ ಸೇವೆ ಸಫಲತೆಯನ್ನು ಸಮೀಪ ತರುತ್ತದೆ. ಸೇವೆಗಂತೂ ನಿಮಿತ್ತರಿದ್ದೇ ಇದ್ದೀರಿ ಮತ್ತು ತಾವೆಲ್ಲರೂ ತಮ್ಮ ತಮ್ಮ ಸೇವಾಕೇಂದ್ರದಲ್ಲಿ ಚೆನ್ನಾಗಿ ಸೇವೆಯನ್ನು ಮಾಡುತ್ತೀದ್ದಿರಿ. ಈ ಉಳಿದ ಯಾವ ಸೇವೆಯ ಕೆಲಸವನ್ನು ನೀಡಲಾಗಿದೆ ಅದರ ಯೋಜನೆಯನ್ನು ಮಾಡಿ. ಅದಕ್ಕಾಗಿ ಸ್ವಯಂನಲ್ಲಿ ಏನೇನು ಅಥವಾ ಸೇವೆಯಲ್ಲಿ ಯಾವ ರೀತಿಯ ವೃದ್ಧಿಯಾಗಬೇಕು, ಅದರ ಯೋಜನೆಯನ್ನು ಮಾಡಿ. ಬಾಕಿ ಬಾಪ್‌ದಾದಾರವರು ಸೇವಾಧಾರಿಗಳನ್ನು ನೋಡಿ ಖುಷಿಪಡುತ್ತಿದ್ದಾರೆ. ಎಲ್ಲರೂ ಒಳ್ಳೆಯ ಸೇವಾಕೇಂದ್ರದ ಉನ್ನತಿಯನ್ನು ಪಡೆಯುತ್ತಿದ್ದೀರಲ್ಲವೇ. ಈಗಂತೂ ಬೇರೆ ಬೇರೆ

ಕಡೆ ಚಲ್ಲಾಪಿಲ್ಲಿಯಾಗಿದ್ದಾರೆ. ಅವರ ಸಂಘಟನೆಯನ್ನು ಮಾಡಿ. ಅವರನ್ನು ಪಕ್ಕಾ ಮಾಡಿ. ಪ್ರಾಕ್ಟಿಕಲ್ ಪ್ರೂಫನ್ನು ಎಲ್ಲರ ಮುಂದೆ ತೋರಿಸಿ, ಮುಂದುವರೆಸಿ ಭಲೆ ಯಾವುದೇ ಸೇವೆಯನ್ನು ಮಾಡುತ್ತಿರಬಹುದು ಒಳ್ಳೆಯದಾಯಿತು, ಒಳ್ಳೆಯದಾಗಿದೆ, ಒಳ್ಳೆಯದಾಗುವುದಿದೆ. ಓಂ ಶಾಂತಿ.

ರಿವೈಸ್ ಕೋರ್ಸ್ 25-10-2002.

***ಬ್ರಾಹ್ಮಣ ಜೀವನದ ಆಧಾರ ಪವಿತ್ರತೆಯ ಘನತೆ***

ಪವಿತ್ರತೆ ಇಲ್ಲದಿದ್ದರೆ ಪರಮಾತ್ಮನ ಪ್ರೀತಿಯು ಅನುಭವವಾಗುವುದಿಲ್ಲ. ಪರಮಾತ್ಮನ ಸರ್ವಪ್ರಾಪ್ತಿಗಳು ಅನುಭವವಾಗುವುದಿಲ್ಲ.... ಬ್ರಾಹ್ಮಣ ಜೀವನದಲ್ಲಿ ಜೀವಿಸಿದಷ್ಟು ಕಾಲ ಸಂಪೂರ್ಣ ಪವಿತ್ರವಾಗಿ ಇರಲೇಬೇಕು ಹೀಗೆ ಪ್ರತಿಜ್ಞೆಯನ್ನು ಮಾಡಿದ್ದೀರಾ? ನಾವು ತಂದೆಯವರು, ತಂದೆ ನಮ್ಮವರು ಎಂಬ ಮೋಜೇ ಮೋಜಿನಲ್ಲಿ ಇದ್ದೀರಲ್ಲವೇ. ತಂದೆ ನಿಮ್ಮ ಪ್ರತಿಯೊಂದು ಸೇವೆಗೆ ಸಹಯೋಗವನ್ನು ಕೊಡುತ್ತಾರೆ. ಆದ್ದರಿಂದ ತಂದೆ ಮತ್ತು ನಾನು ಕಂಬೈನ್ಡ್ ಎಂಬ ಆತ್ಮಿಕ ನಶೆಯಲ್ಲಿ ಸದಾ ಇರಿ. ಏನೇ ಬಂದರೂ ಅರ್ಥಾತ್ ಶಾರೀರಿಕ ರೋಗ ಬಂದರೂ ಸೇವೆಗೆ ಅವಕಾಶ ಬಂದರೂ ಎರಡನ್ನು ತಮ್ಮ ಶಕ್ತಿಯಿಂದ ದಾಟಿ ವಿಜಯೀ ಆಗುತ್ತಿದ್ದೀರಿ. ಶಾರೀರಿಕ ರೋಗ ಎಂಬುದು ಸಹ ಒಂದು ಪರೀಕ್ಷೆ. ಇತರ ಪರೀಕ್ಷೆಗಳಲ್ಲಿ ಹೇಗಾದರೆ ಪಾಸ್ ಆಗುತ್ತಿದ್ದಿರೋ ಇದು ಸಹ ಒಂದು ಪರೀಕ್ಷೆ ಇದರಲ್ಲಿಯೂ ಪಾಸ್ ಆಗುತ್ತಾ ಇದ್ದೀರಿ ಮತ್ತು ಸಹಜವಾಗಿ ಪಾಸ್ ಆಗುತ್ತಿದ್ದೀರಿ. ಎನ್ನುತ್ತಾ ಸ್ನೇಹ ಸಾಗರನಾದ ತಂದೆಯು ತನ್ನ ಸ್ನೇಹಿ ಮಕ್ಕಳನ್ನು ನೋಡುತ್ತಾ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ. ಶಿವ ಪರಮಾತ್ಮ ನನ್ನ ತಂದೆ.

1. ನಾನು ಆತ್ಮಿಕ ಅವಿನಾಶಿ ಸ್ನೇಹ, ಪರಮಾತ್ಮನ ಸ್ನೇಹವನ್ನು ಇಡೀ ಕಲ್ಪದಲ್ಲಿ ಇಲ್ಲಿಯೇ ಅನುಭವ ಮಾಡಿಕೊಳ್ಳುತ್ತಿದ್ದೇನೆ.

2. ಬಾಪ್‌ದಾದಾ ನನ್ನ ತಲೆಯ ಮೇಲೆ ಪವಿತ್ರತೆಯ ಪ್ರಕಾಶದ ಕಿರೀಟವನ್ನು ನೋಡುತ್ತಿದ್ದಾರೆ.

3. ಅನಾದಿಕಾಲದಲ್ಲಿ ಸರ್ವಾತ್ಮರ ಮಧ್ಯದಲ್ಲಿ ನನ್ನ ಹೊಳಪು, ಆತ್ಮಿಕ ಶ್ರೇಷ್ಠತೆ ಮತ್ತು ಪವಿತ್ರತೆಯ ಹೊಳಪು ಅತೀತವಾಗಿ ಇವೆ.

4. ಆದಿಕಾಲದಲ್ಲಿ ದೇವತಾ ಸ್ವರೂಪದಲ್ಲಿಯೂ ನನ್ನ ಆತ್ಮಿಕ ಶ್ರೇಷ್ಠತೆ ಮತ್ತು ಪವಿತ್ರತೆಯ ವ್ಯಕ್ತಿತ್ವ ವಿಶೇಷವಾಗಿ ಇದೆ.

5. ದ್ವಾಪಯುಗದಲ್ಲಿ ನನ್ನ ಪೂಜ್ಯನೀಯ, ಚಿತ್ರಗಳ ಹೊಳಪು ವಿಧಿಪೂರ್ವಕವಾದ ಪೂಜೆ ಮತ್ತು ಆತ್ಮೀಯತೆ ಬೇರೆ ಯಾವ ಚಿತ್ರಗಳಿಗೂ ಇರುವುದಿಲ್ಲ.

6. ಸಂಗಮಯುಗದಲ್ಲಿ ನನ್ನ ಪವಿತ್ರತೆಯ ಶ್ರೇಷ್ಠತೆಯಿಂದ ಪರಮಾತ್ಮನ ಪ್ರೀತಿ, ಪರಮಾತ್ಮನ ಸರ್ವ ಪ್ರಾಪ್ತಿಗಳನ್ನು ಅನುಭವ ಮಾಡಿಕೊಳ್ಳುತ್ತಿದ್ದೇನೆ.

7. ನನ್ನ ಚಹರೆಯಿಂದ ಪವಿತ್ರತೆಯ ಹೊಳಪು ನಡವಳಿಕೆಯಲ್ಲಿ ಪವಿತ್ರತೆಯ ಥಳುಕು ಅರ್ಥಾತ್ ಆತ್ಮಿಕ ನಶೆ ಕಾಣಿಸುವಂತೆ ನೋಡಿಕೊಳ್ಳುತ್ತಿದ್ದೇನೆ.

8. ನಾನು ಏಕ ವ್ರತ (ಪವಿತ್ರತೆಯ ಶ್ರೇಷ್ಠತೆ) ಪಾಠವನ್ನು ಪಕ್ಕಾ ಮಾಡಿಕೊಂಡಿದ್ದೇನೆ.

9. ನಾನು ಸದಾ ಪವಿತ್ರತೆಯ ವ್ಯಕ್ತಿತ್ವದಲ್ಲಿ ಇರುವಂತಹವನು ಎಂಬ ಪ್ರತಿಜ್ಞೆ ಮಾಡಿದ್ದೇನೆ.

10. ನಾನು ಬ್ರಾಹ್ಮಣ ಜೀವನದಲ್ಲಿ ಜೀವಿಸುವಷ್ಟು ಕಾಲ ಸಂಪೂರ್ಣ ಪವಿತ್ರವಾಗಿ ಇರುತ್ತೇನೆ ಎಂಬ ಪ್ರತಿಜ್ಞೆಯ ಪ್ರತ್ಯಕ್ಷ ಸ್ವರೂಪ.

11. ನಾನು ಶುಭ ಭಾವನೆ, ಶುಭಕಾಮನೆಯ ಪವಿತ್ರ ವೃತ್ತಿ, ಪ್ರತಿಯೊಬ್ಬರನ್ನು ಆತ್ಮಿಕ ರೂಪ ಅಥವಾ ಫರಿಶ್ತಾ ರೂಪದಲ್ಲಿ ನೋಡುವ ಪವಿತ್ರ ದೃಷ್ಟಿ, ಕೃತಿ ಅರ್ಥಾತ್ ಕರ್ಮದಲ್ಲಿ ಯಾರು ಏನೇ ಮಾಡಿದರೂ, ನಿಂದಿಸಿದರೂ, ಬೈದರೂ, ದುಃಖವನ್ನು ಕೊಟ್ಟರೂ, ಗೌರವವನ್ನು ಕೊಡದೇ ಇದ್ದರೂ, ಅಪಮಾನ ಮಾಡಿದರೂ ನಾನು ಆ ವಿಷಯಗಳು ಎಂಬ ಕೊಳಕನ್ನು (ಕಸವನ್ನು ) ತೆಗೆದುಕೊಳ್ಳದೇ ಫಾಲೋ ಫಾದರ್ ಆಗಿ ಸಹನಶೀಲದೇವಿ ಅಥವಾ ದೇವತೆಯಾಗಿ ಸುಖವನ್ನು ಕೊಟ್ಟು ಸುಖವನ್ನೇ ಪಡೆಯುವ ಮಾಸ್ಟರ್ ಬ್ರಹ್ಮನು.

12. ನಾನು ಅಮರ ಭವ!ದ ವರದಾನಿಸ್ವರೂಪ.

13. ನಾನು ಪ್ರವೃತ್ತಿಯಲ್ಲಿ ಇರುತ್ತಾ ಮಹಾಮಂಡಲೇಶ್ವರರನ್ನು ನನ್ನ ಪಾದಗಳ ಮೇಲೆ ಭಾಗಿಸಿಕೊಳ್ಳುವ, ಪ್ರಪಂಚದ ಮುಂದೆ, ವಿಶ್ವದ ಮುಂದೆ, ಉದಾಹರಣೆಯಾಗಿದ್ದೇನೆ.

14. ನಾನು ಪ್ರವೃತ್ತಿಯಲ್ಲಿರುತ್ತಲೂ ಅಪವಿತ್ರತೆ (ಸ್ವಪ್ನ ಮಾತ್ರವೂ ಇಲ್ಲದೇ) ಇಂದ ನಿವೃತ್ತಿಯಾಗಿ ವಿಶ್ವವೆಂಬ ಶೋಕೇಸ್ ನಲ್ಲಿ ಒಂದು ಮಾಡಲ್ ಆಗಿ ಇದ್ದೇನೆ.

15. ನನ್ನ ಮುಖಚಿತ್ರ(ಫೀಚರ್ಸ್) ನಿಂದ ಭವಿಷ್ಯ(ಫ್ಯೂಚರ್) ಅಥವಾ ಫರಿಸ್ತಾ ಸ್ವರೂಪ ಕಾಣಿಸುತ್ತಿದೆ.

16. ನನ್ನ ಚಲನೆ ಮತ್ತು ಚಹರೆಯಿಂದ ತಂದೆಯು ಪ್ರತ್ಯಕ್ಷವಾಗಿ ಕಾಣಿಸುವ ರೀತಿ ಪ್ಲಾನ್ ಅನ್ನು ತಯಾರು ಮಾಡಿಕೊಂಡಿದ್ದೇನೆ.

17. ನಾನು ತಂದೆ ಮತ್ತು ನಾನು ಸದಾ ಕಂಬೈನ್ಡ್ ಎಂಬ ಆತ್ಮಿಕ ನಶೆಯಲ್ಲಿ ಇದ್ದೇನೆ.

18. ನಾನು ಲಾಸ್ಟ್ ನಿಂದ ಫಾಸ್ಟ್ ಆಗಿ ಮೊದಲ ನಂಬರ್ ಪಡೆಯುವ ತೀವ್ರ ಪುರುಷಾರ್ತಿಯಾಗಿದ್ದೇನೆ.

19. ಏನೇ ಬಂದರೂ ಅರ್ಥಾತ್ ಶಾರೀರಿಕ ರೋಗ ಬಂದರೂ, ಸೇವೆಗೆ ಅವಕಾಶ ಬಂದರೂ, ಎರಡನ್ನು ನನ್ನ ಶಕ್ತಿಯಿಂದ ದಾಟುವ ವಿಜಯೀ ಆಗಿದ್ದೇನೆ.

20. ನಾನು ಅಮರಭವ!ದ ವರದಾನಿ ಸ್ವರೂಪ.

21. ನಾನು ವಿಶೇಷ ಸೇವಾಧಾರಿ.